ರಾಜ್ಯ ಅಧೀನ ಸಂಸ್ಥೆಗಳಿಂದ:

ಕೆ.ಎಸ್.ಐ.ಐ.ಡಿ.ಸಿ.	ರೂ. 0.50 ಲಕ್ಷ
ಕೆ.ಎಸ್.ಎಫ್.ಸಿ.	ರೂ. 7.34 ಲಕ್ಷ
ಕೆ.ಪಿ.ಸಿ.	ರೂ. 7.34 ಲಕ್ಷ
ಒಟ್ಟು	**ರೂ. 75.68 ಲಕ್ಷ**

ಇದಕ್ಕೆ ಬೇಕಾದ ಯಂತ್ರಗಳನ್ನು ಮೆಸರ್ಸ್ ಜಿ.ಕೆ. ಸಿಂಥೆಟಿಕ್ಸ್ ನ್ಯೂ ಡೆಲ್ಲಿ ಇವರಿಂದ ತರಿಸಿಕೊಳ್ಳಲಾಗಿದೆ. ಈ ಯಂತ್ರಗಳನ್ನು ಮೆಸರ್ಸ್ ವಿನಕಾಸ್ ಡೆನ್ಮಾರ್ಕ್ ಇವರು ತಯಾರಿಸುತ್ತಾರೆ. ಇದಕ್ಕೆ ರೂ. 75.48 ಲಕ್ಷ ಖರ್ಚಾಗಿರುತ್ತದೆ.

ಇ) ಸಲಕರಣಿಗಳ ಸ್ಥಾಪನಾ ಕಾರ್ಯ ಪೂರ್ತಿಗೊಂಡಿಲ್ಲ. ಎಂದು ರಾಜ್ಯ ಸಂಸ್ಥೆಗಳು ಮೆಸರ್ಸ್ ಜಿ.ಕೆ. ಸಿಂಥೆಟಿಕ್ಸ್ ಅವರ ಮೇಲೆ ಮಾನ್ಯ ಸಿಟಿ ಸಿವಿಲ್ ಜಡ್ಜ್ ಅವರಲ್ಲಿ ಪಿಟಿಷನ್ ಹಾಕಿ ರೂ. 111.14 ಲಕ್ಷವನ್ನು ಕೊಡಬೇಕೆಂದು ಕೋರಿದೆ. ಈ ವಿಚಾರಣೆಯನ್ನು ಮೆಸರ್ಸ್ ಜಿ.ಕೆ. ಸಿಂಥೆಟಿಕ್ಸ್‌ನವರು ಬಿ.ಐ.ಎಫ್.ಆರ್. ನಲ್ಲಿ ಇರುವುದರಿಂದ ಪ್ರಕರಣ ಮುಂದೂಡಲಾಗಿದೆ.

ಈ) ರಾಜ್ಯ ಅಧೀನ ಸಂಸ್ಥೆಗಳಿಂದ ಈ ಕೆಳಕಂಡಂತೆ ಖರ್ಚು ಮಾಡಲಾಗಿದೆ.

ಕೇಂದ್ರ ಸರ್ಕಾರದ ವಂತಿಗೆ	ರೂ. 60.50 ಲಕ್ಷ
ಕೆ.ಎಸ್.ಐ.ಐ.ಡಿ.ಸಿ.	ರೂ. 0.75 ಲಕ್ಷ
ಕೆ.ಎಸ್.ಎಫ್.ಸಿ.	ರೂ. 7.34 ಲಕ್ಷ
ಕೆ.ಪಿ.ಸಿ.	ರೂ. 7.34 ಲಕ್ಷ
ಒಟ್ಟು	**ರೂ. 75.93 ಲಕ್ಷ**

ಇದುವರೆಗೆ ಉಪಕರಣಗಳ ಸ್ಥಾಪನಾ ಕಾರ್ಯವು ಪೂರ್ಣಗೊಂಡಿಲ್ಲವಾದ್ದರಿಂದ ವಿದ್ಯುತ್ ಉತ್ಪಾದನೆ ಇರುವುದಿಲ್ಲ.

2062 (2610) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯ ವಿದ್ಯುತ್ ಕಂಪನಿಯಲ್ಲಿ ಇರುವ ಒಟ್ಟು ಇಂಜಿನಿಯರುಗಳ ಹುದ್ದೆಗಳೆಷ್ಟು ಹಾಗೂ ಖಾಲಿ ಇರುವ ಹುದ್ದೆಗಳು ಎಷ್ಟು;

ಆ) ಲೈನ್ ಮ್ಯಾನ್ ಹುದ್ದೆಗಳೆಷ್ಟು ಹಾಗೂ ಖಾಲಿ ಇರುವ ಹುದ್ದೆಗಳು ಎಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಕೊಡಗು ಜಿಲ್ಲೆಯ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಮಂಜೂರಾಗಿರುವ, ಹಾಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಇಂಜಿನಿಯರ್ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಹುದ್ದೆಯ ಹೆಸರು	ಮಂಜೂರಾದ ಹುದ್ದೆಗಳು	ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು	ಖಾಲಿ ಹುದ್ದೆಗಳು
1.	ಕಾರ್ಯನಿರ್ವಾಹಕ ಇಂಜಿನಿಯರ್ (ವಿ)	1	1	–
2.	ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)	5	2	3
3	ಸಹಾಯಕ ಇಂಜಿನಿಯರ್ (ವಿ)	13	8	5
4	ಕಿರಿಯ ಇಂಜಿನಿಯರ್ (ವಿ)	17	14	3
	ಒಟ್ಟು	**36**	**25**	**11**

ಆ) ಕೊಡಗು ಜಿಲ್ಲೆಯಲ್ಲಿ ಮಂಜೂರಾಗಿರುವ, ಹಾಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಲೈನ್‌ಮ್ಯಾನ್ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಕ್ರ. ಸಂ.	ಹುದ್ದೆಯ ಹೆಸರು	ಮಂಜೂರಾದ ಹುದ್ದೆಗಳು	ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು	ಖಾಲಿ ಹುದ್ದೆಗಳು
1	ಲೈನ್ ಮ್ಯಾನ್	138	76	62
2	ಸಹಾಯಕ ಲೈನ್‌ಮ್ಯಾನ್	140	4	136
3	ತಾತ್ಕಾಲಿಕ ಗ್ಯಾಂಗ್‌ಮ್ಯಾನ್	–	134	–

ತಾತ್ಕಾಲಿಕ ಗ್ಯಾಂಗ್‌ಮ್ಯಾನ್‌ಗಳು ಹೆಚ್ಚು ಕಡಿಮೆ ಸಹಾಯಕ ಲೈನ್ ಮ್ಯಾನ್‌ಗಳು ನಿರ್ವಹಿಸುತ್ತಿದ್ದ ಕಾರ್ಯಗಳನ್ನು ನಿರ್ವಹಿಸುತ್ತಿರುತ್ತಾರೆ.

2063 (3083) ಶ್ರೀ ಚಂದ್ರಶೇಖರ್ ಪಾಟೀಲ್ ರೇವೂರ (ಗುಲ್ಬರ್ಗ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಮಹಾನಗರದ ವರ್ತುಲ ರಸ್ತೆ ಕಾಮಗಾರಿಗಳು ಎಷ್ಟು ವರ್ಷಗಳಿಂದ ನಡೆಯುತ್ತಿದೆ ಮತ್ತು ಎಷ್ಟು ಕಿ.ಮೀ.ಗಳವರೆಗೆ ಈ ರಸ್ತೆಯನ್ನು ನಿರ್ಮಿಸಲಾಗುತ್ತಿದೆ;